**ಕರ್ನಾಟಕ ಸರ್ಕಾರ**
**(ತಾಂತ್ರಿಕ ಶಿಕ್ಷಣ ಇಲಾಖೆ)**

ಸಂಖ್ಯೆ: ಸಿಟಿಇ 06 ಡಿವಿಪಿ (1) 2022

ಆಯುಕ್ತರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು- 560 001.
ದಿನಾಂಕ: 12.07.2022

**ಅಧಿಕೃತ ಜ್ಞಾಪನ**

**ವಿಷಯ:** 2022-23 ನೇ ಸಾಲಿನಲ್ಲಿ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಹೆಚ್ಚುವರಿ ಭೋಧನಾ ಕಾರ್ಯಭಾರವನ್ನು ನಿರ್ವಹಿಸಿದ ಅರೆಕಾಲಿಕ ಉಪನ್ಯಾಸಕರ ವೇತನಕ್ಕೆ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಇಡಿ 70 ಹೆಚ್‌ಪಿಟಿ 2022, ದಿ: 05.04.2022
2. ಸರ್ಕಾರದ ಆದೇಶ ಸಂಖ್ಯೆ: ಇಡಿ 70 ಹೆಚ್‌ಪಿಟಿ 2022, ದಿ: 13.04.2022
3. ಸರ್ಕಾರದ ಆದೇಶ ಸಂಖ್ಯೆ: ಇಡಿ 70 ಹೆಚ್‌ಪಿಟಿ 2022, ದಿ: 08.06.2022
4. ಸರ್ಕಾರದ ಪತ್ರದ ಸಂಖ್ಯೆ:ಇಡಿ 09 ಡಿಟಿಇ 2022(ಭಾಗ-1) ದಿ: 04.06.2022
5. ಆಯುಕ್ತಾಲಯದ ಸುತ್ತೋಲೆ ಸಂಖ್ಯೆ:ಡಿಟಿಇ 12 ಇಎಸ್ ಟಿ(3) 2022 ದಿ:07.06.2022

*********

ಮೇಲೆ ನಮೂದಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರ ಸರ್ಕಾರದ ಆದೇಶದಲ್ಲಿ 2022-23 ನೇ ಆರ್ಥಿಕ ಸಾಲಿಗೆ ಶಿಕ್ಷಣ ಇಲಾಖೆಯ ಉನ್ನತ ಶಿಕ್ಷಣ ವಲಯದಡಿ ಬರುವ ತಾಂತ್ರಿಕ ಶಿಕ್ಷಣಕ್ಕೆ (ರಾಜ್ಯ ವಲಯ ಯೋಜನೆಗಳು) ಸಂಬಂಧಿಸಿದಂತೆ ಆಯವ್ಯಯದಲ್ಲಿನ ಯೋಜನಾ ಕಾರ್ಯಕ್ರಮಗಳಡಿ ಮುಂದುವರಿದ ಕಾರ್ಯಕ್ರಮಗಳನ್ನು ಮುಂದುವರಿಸಲು ಮತ್ತು ಅನುಷ್ಠಾನಗೊಳಿಸಲು ಅನುಮತಿ ನೀಡಿ ಸರ್ಕಾರ ಆದೇಶಿಸಿದೆ.

ಉಲ್ಲೇಖ(2) ಮತ್ತು (3) ರ ಸರ್ಕಾರದ ಆದೇಶದಲ್ಲಿ 2022-23 ನೇ ಆರ್ಥಿಕ ಸಾಲಿನ ಆಯವ್ಯಯದಲ್ಲಿ ಮೊದಲನೇ ಹಾಗೂ ಎರಡನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡಿ ಆದೇಶಿಸಿದೆ.

ಉಲ್ಲೇಖ(4) ಮತ್ತು (5) ರ ಸರ್ಕಾರಿ ಆದೇಶ ಮತ್ತು ಆಯುಕ್ತಾಲಯದ ಸುತ್ತೋಲೆಯಲ್ಲಿ 2022-23 ನೇ ಸಾಲಿನಲ್ಲಿ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಹೆಚ್ಚುವರಿ ಭೋಧನಾ ಕಾರ್ಯಭಾರವನ್ನು ನಿರ್ವಹಿಸಲು ಅರೆಕಾಲಿಕ ಉಪನ್ಯಾಸಕರ ಸೇವೆಯನ್ನು ಪಡೆಯಲು ಅನುಮತಿ ನೀಡಲಾಗಿದೆ.

2022-23 ನೇ ಶೈಕ್ಷಣಿಕ ಸಾಲಿಗೆ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಹೆಚ್ಚುವರಿ ಭೋಧನಾ ಕಾರ್ಯಭಾರವನ್ನು ನಿರ್ವಹಿಸಲು ನೇಮಕ ಮಾಡಿಕೊಂಡಿರುವ ಅರೆಕಾಲಿಕ ಉಪನ್ಯಾಸಕರುಗಳಿಗೆ ಗೌರವ ಧನ ಪಾವತಿಸಲು 2022-23 ನೇ ಆರ್ಥಿಕ ಸಾಲಿನ ಆಯವ್ಯಯದಲ್ಲಿ ಬಿಡುಗಡೆಯಾಗಿರುವ ಅನುದಾನದಲ್ಲಿ ಲೆಕ್ಕ ಶೀರ್ಷಿಕೆ 2203-00-105-0-01-324 ರೂ: 28,12,500/- ಗಳನ್ನು ಈ ಕೆಳಗಿನ ಕೋಷ್ಟಕದಲ್ಲಿರುವಂತೆ ಅನುದಾನವನ್ನು ಬಿಡುಗಡೆ ಮಾಡಿ ಆದೇಶಿಸಲಾಗಿದೆ.

(ರೂ. ಗಳಲ್ಲಿ)

| ಕ್ರ ಸಂ | ಸಂಸ್ಥೆ ಹೆಸರು | ಡಿಡಿಓ ಕೋಡ್ | ಬಿಡುಗಡೆ ಮಾಡಲಾದ ಅನುದಾನ |
|---|---|---|---|
| 1 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಭದ್ರಾವತಿ | 332400 | 8,12,500/- |

| ಕ್ರ ಸಂ | ಸಂಸ್ಥೆ ಹೆಸರು | ಡಿಡಿಒ ಕೋಡ್ | ಬಿಡುಗಡೆ ಮಾಡಲಾದ ಅನುದಾನ |
|---|---|---|---|
| 2 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಮಂಗಳೂರು | 332570 | 5,00,000/- |
| 3 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಬಾಗಲಕೋಟೆ | 332770 | 4,37,500/- |
| 4 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಹುಬ್ಬಳ್ಳಿ | 332970 | 4,37,500/- |
| 5 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ,ಕಲಬುರ್ಗಿ | 333010 | 2,50,000/- |
| 6 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಬಳ್ಳಾರಿ | 333050 | 3,75,000/- |
| | | ಒಟ್ಟು | **28,12,500/-** |

ಪ್ರಸ್ತುತ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಬಿಡುಗಡೆ ಮಾಡಿರುವ ಅನುದಾನದಲ್ಲಿ ಪ್ರಸಕ್ತ ಸಾಲಿನಲ್ಲಿ ಆಯುಕ್ತಾಲಯದಿಂದ ಅನುಮೋದನೆ ಪಡೆದಿರುವ ಅರೆಕಾಲಿಕ ಉಪನ್ಯಾಸರುಗಳಿಗೆ ಮಾತ್ರ ಗೌರವ ಧನ ಪಾವತಿಸಲು ಕ್ರಮ ವಹಿಸಬೇಕೆಂದು ಆದೇಶಿಸಲಾಗಿದೆ. ಈ ಅನುದಾವನ್ನು ಯಾವ ಉದ್ದೇಶಕ್ಕೆ ಬಿಡುಗಡೆ ಮಾಡಲಾಗಿದಿಯೋ ಅದೇ ಉದ್ದೇಶಕ್ಕೆ ಬಳಸಿ ವೆಚ್ಚ ಮಾಡಿ ಬಳಕೆ ಪ್ರಮಾಣ ಪತ್ರ (Utilization Certificate) ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ.

**(ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

12/7/22

**ಜಂಟಿ ನಿರ್ದೇಶಕರು(ಆಡಳಿತ)**

**ತಾಂತ್ರಿಕ ಶಿಕ್ಷಣ ಇಲಾಖೆ.**

**ಇವರಿಗೆ:**

1. ಸಂಬಂಧಪಟ್ಟ ಪ್ರಾಂಶುಪಾಲರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

**ಪ್ರತಿ:**

1. ಜಂಟಿ ನಿರ್ದೇಶಕರು (ಆಡಳಿತ), ತಾಂತ್ರಿಕ ಶಿಕ್ಷಣ ಆಯುಕ್ತಾಲಯ, ಬೆಂಗಳೂರು- ಇವರ ಮಾಹಿತಿಗಾಗಿ
2. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ಆಯುಕ್ತಾಲಯ, ಬೆಂಗಳೂರು- ಇವರ ಮಾಹಿತಿಗಾಗಿ
3. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು ಖಜಾನಾಧಿಕಾರಿಯವರು, ರಾಜ್ಯ ಹುಜೂರ್ ಖಜಾನೆ
4. ಖಜಾನಾಧಿಕಾರಿಯವರು, ರಾಜ್ಯ ಹುಜೂರ್ ಖಜಾನೆ
5. ಲೆಕ್ಕಾಧಿಕಾರಿಗಳು (ಬಿಲ್ಸ್)
6. ನಗದು ವಿಭಾಗದ ಅಧೀಕ್ಷಕರು / ಕಾರ್ಯನಿರ್ವಾಹಕರು
7. ಆಕ್ವಿವೇಷನ್ ಕಡತಕ್ಕೆ